ತೊಂದರೆ ಅನುಭವಿಸಬೇಕಾಗುತ್ತಿತ್ತು.

ಅತ್ತಿಗೆ ನನಗೆ ಅಮಾವಾಸ್ಯೆ, ಪೂರ್ಣಿಮೆ, ಗ್ರಹಣ ಮುಂತಾದ ಅನೇಕ ಬಾಹ್ಯಾಕಾಶ ವಿಚಾರಗಳು, ಪ್ರಾಣಿ ಪಕ್ಷಿಗಳ ಜೀವನ ವೈವಿಧ್ಯದ ವಿಚಾರಗಳು, ಭೌಗೋಳಿಕ ಶಾಸ್ತ್ರದ ಅಂಶಗಳು, ನಮ್ಮ ಪರಂಪರೆ ಮತ್ತು ಪುರಾತನ ಶಾಸ್ತ್ರಗಳಲ್ಲಿ ಅವು ಅಡಕವಾಗಿರುವ ಬಗೆ ಎಲ್ಲವನ್ನೂ ಅನೇಕಾನೇಕ ರೀತಿಯಲ್ಲಿ ತಿಳಿಸಿ ಹೇಳುತ್ತಿದ್ದಳು. ನನಗೆ ಅದನ್ನು ಕೇಳುವಾಗೆಲ್ಲ ಇದು ನಿಜವೇ, ಇದು ಹೀಗಿರಲು ಸಾಧ್ಯವೇ? ಎಂಬ ಪ್ರಶ್ನೆ ಮೂಡುತ್ತಿತ್ತು. ಅದಕ್ಕೆ ಸರಿಯಾಗಿ ಅತ್ತಿಗೆ ನನಗೆ ಅನೇಕ ಪುಸ್ತಕಗಳನ್ನು ಬೇರೆ ಕಡೆಯಿಂದ ತರಿಸಿ ಕೊಡುತ್ತಿದ್ದಳು. 'ಕಾಲೇಜಿಗೆ ಹೋಗದಿದ್ದರೆ ಬೇಡ. ಜ್ಞಾನಾರ್ಜನೆ ಎಲ್ಲಿದ್ದರೂ ನಡೆಯುತ್ತೆ' ಅನ್ನುತ್ತಿದ್ದಳು. ಅವಳು ನೀಡಿದ ಪುಸ್ತಕಗಳನ್ನು ಓದುವುದರ ಮೂಲಕವೇ ನಾನು ಪುಸ್ತಕ ಪ್ರೇಮಿ ಆದೆ. ಈಗ ನನ್ನ ಪುಸ್ತಕ ಭಂಡಾರದಲ್ಲಿ ಅನೇಕ ಅಮೂಲ್ಯ ರತ್ನಗಳಿರುವುದು ಸುಳ್ಳಲ್ಲ. ಪ್ರಕೃತಿಯ ಅನೇಕ ಸತ್ಯಾಂಶಗಳನ್ನು ಓದುತ್ತಲೇ ತಿಳಿದೆ. ಶಿವರಾಮ ಕಾರಂತರ ಜ್ಞಾನ ವಿಜ್ಞಾನ ಪುಸ್ತಕ ಸಂಪುಟಗಳು ನನ್ನ ಜ್ಞಾನದಾಹವನ್ನು ಬಹುಮಟ್ಟಿಗೆ ನೀಗಿಸಿದ್ದವು. ನನ್ನೊಳಗೆ ಇದ್ದ ಅವಿದ್ಯೆ ಎಂಬ ರಾಕ್ಷಸ ದೂರವಾದ ಎಂದು ಅನ್ನಿಸಿದ್ದೇ ಅಲ್ಲದೆ ಅವುಗಳನ್ನು ಓದುತ್ತಾ ನನ್ನ ಬದುಕಿನ ಸಾರ್ಥಕತೆಯ ಬಾಗಿಲು ಬಹಳ ವಿಸ್ತಾರವಾಗಿ ತೆರಕೊಂಡು ಬಿಟ್ಟಿತು. ಏಕೆಂದರೆ ಮೊತ್ತ ಮೊದಲನೆಯದಾಗಿ ನಾನು ನನ್ನ ಪತಿಯ ಜೊತೆಯಲ್ಲಿ ಎಂದೂ ಕೀಳರಿಮೆಯಿಂದ ಮಾತನಾಡಿದ್ದೇ ಇಲ್ಲ. ಅವರ ಸಮನಾಗಿ ಸಮಸ್ತ ವಿಚಾರಗಳಲ್ಲೂ ಸ್ಪಂದಿಸಲು ನನಗೆ ಸಾಧ್ಯವಾಗಿತ್ತು. ಇದೇ ನನ್ನ ಕುಟುಂಬದ ಸಾಮರಸ್ಯದ ರಹಸ್ಯವೂ ಆಗಿತ್ತು.

ಒಂದು ದಿನ ಅಮ್ಮ ಹುತ್ತಕ್ಕೆ ಹಾಲು ನೀಡುತ್ತಿದ್ದಾಗ ನಾನು ಕೇಳಿದೆ, 'ಅತ್ತಿಗೆ ಹಾವು ನಿಜವಾಗಿ ಹಾಲು ಕುಡಿಯುತ್ತಾ?'

'ಇಲ್ಲ' ಅಂದಳು ಅತ್ತಿಗೆ ಚುಟುಕಾಗಿ. 'ಮತ್ತೆ ನಾವು ಅನೇಕ ಸಲ ಹಾಕುತ್ತೇವಲ್ಲ?' ಅಂದೆ.

'ನೀನು ಹಾಕಿದರೂ ಅಷ್ಟೆ. ಹಾಕದಿದ್ದರೂ ಅಷ್ಟೆ. ನಿಸರ್ಗವನ್ನು ಸೃಷ್ಟಿಸಿದ ದೇವರು ಪ್ರತಿ ಪ್ರಾಣಿಗೂ ಆಹಾರ ಇಟ್ಟಿದ್ದಾನೆ. ಅದನ್ನು ಪಡೆಯುವ ಚಾಕಚಕ್ಯತೆಯನ್ನೂ ಕೊಟ್ಟಿದ್ದಾನೆ. ಅಲ್ಲಿ ಸುರಿಯುವ ಹಾಲನ್ನು ಯಾವುದಾದರೂ ಮಗುವಿಗೋ, ರೋಗಿಗೋ ಕೊಟ್ಟಿದ್ದರೆ ಹಾಲು ಸಾರ್ಥಕವಾಗುತ್ತಿತ್ತು. ಇದೆಲ್ಲ ನಮ್ಮ ಕಲ್ಪನೆ ಅಷ್ಟೆ' ಅಂದಳು.

'ಮತ್ತೆ ಅಮ್ಮ ಹೇಳುತ್ತಾರೆ ಸರ್ಪದೋಷ ಬರುತ್ತೆ ಅಂತ' ಅಂದೆ.

